ಕೇಂದ್ರ ಸಾಹಿತ್ಯ ಅಕಾಡೆಮಿ ಉಪಾಧ್ಯಕ್ಷ ಮಾಧವ್ ಕೌಶಿಕ್ ಆಶಯ

# ಕವಿತೆ ಅನ್ಯಾಯಕ್ಕೊಳಗಾದವರ ಧ್ವನಿಯಾಗಲಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕವಿತೆಗಳು ಮನದ ಕತ್ತಲನ್ನು ಕಳೆಯುವ ಜತೆಗೆ ಸಮಾಜದಲ್ಲಿ ಅನ್ಯಾಯಕ್ಕೊಳಗಾದವರಿಗೆ ಧ್ವನಿಯಾಗಬೇಕು' ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಉಪಾಧ್ಯಕ್ಷ ಮಾಧವ್ ಕೌಶಿಕ್ ಆಶಯ ವ್ಯಕ್ತಪಡಿಸಿದರು.

ಕೇಂದ್ರ ಸಾಹಿತ್ಯ ಅಕಾಡೆಮಿಯು ಜೈನ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ ನಗರದಲ್ಲಿ ಶನಿವಾರ ಆಯೋಜಿಸಿದ್ದ 'ಈಶಾನ್ಯ ಹಾಗೂ ದಕ್ಷಿಣ ಭಾರತೀಯ ಕಾವ್ಯೋತ್ಸವ'ದಲ್ಲಿ ಅವರು ಮಾತನಾಡಿದರು.

'ಕವಿಗಳು ಸಂಘ- ಸಂಸ್ಥೆ, ಪಕ್ಷಗಳೊಂದಿಗೆ ಗುರುತಿಸಿಕೊಳ್ಳದೇ ಸ್ವತಂತ್ರರಾಗಿರಬೇಕು. ಸತ್ಯಾಂಶ ತಿಳಿಸುವಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು. ಸಾಮಾನ್ಯ ವ್ಯಕ್ತಿಗಳ ಸಂವಹನ ಕಾರಣನಾಗಿರುವ ಕವಿ, ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯ ಮತ್ತು ಅಸಮಾನತೆಯನ್ನು ಕವಿತೆಗಳ ಮೂಲಕವೇ ಪ್ರತಿಭಟಿಸಬೇಕು' ಎಂದರು.

**ಮುಖ್ಯಾಂಶಗಳು**

- 'ಈಶಾನ್ಯ ಹಾಗೂ ದಕ್ಷಿಣ ಭಾರತೀಯ ಕಾವ್ಯೋತ್ಸವ
- ಸತ್ಯಾಂಶ ತಿಳಿಸುವಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು
- ಭಾರತೀಯ ಸಾಹಿತ್ಯದಲ್ಲಿ ಹೊಸತನ: ಸಿರ್ಪಿ ಬಾಲಸುಬ್ರಹ್ಮಣ್ಯಂ

'ಯೋಧರು ಗಡಿಯಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದು ಶತ್ರುಗಳ ವಿರುದ್ಧ ಯುದ್ಧ ಮಾಡಿದರೆ, ಕವಿಗಳಿಗೆ ಲೇಖನಿ ಹಿಡಿದು ಹೋರಾಡುವ ಶಕ್ತಿಯಿದೆ. ಕವಿಯಿಂದ ಅಮೃತ ಹಾಗೂ ವಿಷ ಎರಡನ್ನೂ ಉಣಿಸಲು ಸಾಧ್ಯ. ಆದ್ದರಿಂದ ಸಮಾಜಕ್ಕೆ ಕನ್ನಡಿ ಹಿಡಿಯುವ ಕವಿಗಳು ಜಾಗತಿಕ ವಿದ್ಯಮಾನ ಹಾಗೂ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಪ್ರೇರಣೆಯಾಗುವಂತಹ ಕವನ ರಚನೆ ಮಾಡಬೇಕು' ಎಂದು ಹೇಳಿದರು.




ಕಾರ್ಯಕ್ರಮದಲ್ಲಿ ಮಾಧವ ಕೌಶಿಕ್ (ಎಡದಿಂದ ಮೂರನೆಯವರು) ಮತ್ತು ಸಿರ್ಪಿ ಬಾಲಸುಬ್ರಮಣ್ಯಂ ಚರ್ಚಿಸಿದರು. ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿ ಕೆ. ಶ್ರೀನಿವಾಸ್ ರಾವ್ ಹಾಗೂ ಕನ್ನಡ ಸಲಹಾ ಮಂಡಳಿ ಸಂಚಾಲಕ ಸಿದ್ಧಲಿಂಗಯ್ಯ ಇದ್ದರು

ಪ್ರಜಾವಾಣಿ ಚಿತ್ರ

ಸಾಹಿತ್ಯ ಅಕಾಡೆಮಿಯ ತಮಿಳು ಸಲಹಾ ಮಂಡಲಿಯ ಸಂಚಾಲಕ ಸಿರ್ಪಿ ಬಾಲಸುಬ್ರಹ್ಮಣ್ಯಂ, 'ಶ್ರೀಮಂತ ಸಾಂಸ್ಕೃತಿಕ ಪರಂಪರೆ ಹೊಂದಿರುವ ನಮ್ಮ ದೇಶದಲ್ಲಿ ಪ್ರಾದೇಶಿಕ ವೈವಿಧ್ಯತೆ ಕಂಡು ಬಂದರೂ ಸಾಹಿತ್ಯದಲ್ಲಿ ಸಮಾನತೆ ಕಾಣಬಹುದು. ನಮ್ಮ ಬದುಕಿನ ವಿಧಾನವನ್ನು ಚಿತ್ರಿಸುವ ಮುದ್ರೆಯೇ ಕವಿತೆ. ಕವಿಗಳು ತಮ್ಮ ಕವಿತೆಯಲ್ಲಿ ತಾವು ಬೆಳೆದು ಬಂದ ಪರಿಸರವನ್ನೂ ಚಿತ್ರಿಸುತ್ತಾ ಬಂದಿದ್ದಾರೆ. ಇದರಿಂದಾಗಿ ಭಾರತೀಯ ಸಾಹಿತ್ಯದಲ್ಲಿ ಹೊಸತನವನ್ನು ಕಾಣಬಹುದಾಗಿದೆ' ಎಂದರು.

# 28ರಿಂದ ಭಾರತೀಯ ಕಾವ್ಯೋತ್ಸವ

**ಸಾಹಿತ್ಯ** ಅಕಾಡೆಮಿ ಡಿ.28 ಮತ್ತು 29 ರಂದು ಈಶಾನ್ಯ ಮತ್ತು ದಕ್ಷಿಣ ಭಾರತದ ಕಾವ್ಯೋತ್ಸವವನ್ನು ಆಯೋಜಿಸಿದೆ. ಭಾರತೀಯ ಭಾಷೆಗಳನ್ನು ಪ್ರೋತ್ಸಾಹಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶ.

ಕಾರ್ಯಕ್ರಮವನ್ನು ತಮಿಳು ಸಾಹಿತ್ಯ ಮಂಡಳಿ ಸಂಚಾಲಕ, ಕವಿ ಸಿರ್ಪಿ ಬಾಲಸುಬ್ರಮಣ್ಯಂ ಉದ್ಘಾಟಿಸಲಿದ್ದಾರೆ. ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಚಂದ್ರಶೇಖರ್ ಕಂಬಾರ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಸ್ಕೂಲ್ ಆಫ್ ಹ್ಯುಮ್ಯಾನಿಟಿ ಜೈನ್ ವಿಶ್ವವಿದ್ಯಾಲಯದ ಪ್ರಾಂಶುಪಾಲೆ ಮೈಥಿಲಿ.ಪಿ.ರಾವ್ ವಿಶೇಷ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಈಶಾನ್ಯ ಭಾರತೀಯ ಕಾವ್ಯದ ಸೃಜನಶೀಲತೆ ಮತ್ತು ಪರಿಸರದ ಇತ್ತೀಚಿನ ಒಲವು ಮತ್ತು ನಿಲುವು ವಿಷಯಗಳ ಕುರಿತಾಗಿ ಸಮ್ಮೇಳನ ನಡೆಯಲಿದೆ. ಇದರಲ್ಲಿ ಕೆ.ಕುಂಜೊ ಸಿಂಗ್(ಮಣಿಪುರಿ) ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವಿಷಯದ ಕುರಿತು ಅವರು ಪ್ರಬಂಧ ಮಂಡಿಸಲಿದ್ದಾರೆ.

ಇವರ ಜತೆ ಅರಿಂದಮ್ ಬೊರ್ಕಟಕಿ (ಅಸ್ಸಾಮಿ), ಧನಂಜಾಯ್ ಬ್ರಹ್ಮ(ಬೋಡೊ), ರೂಪೇಶ್ ಶರ್ಮ(ನೇಪಾಳಿ) ಪ್ರಬಂಧ ಮಂಡಿಸಲಿದ್ದಾರೆ.

ಈ ಕಾರ್ಯಕ್ರಮದ ಬಳಿಕ ಬಹುಭಾಷಾ ಕವಿಗೋಷ್ಠಿ ನಡೆಯಲಿದ್ದು, ಮಕರಂದ ಪರಾಂಜಪೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕೌಶಿಕ್ ಕಿಶಲೇ(ಅಸ್ಸಾಮಿ), ಪಾಲಕಿ ಬಸುಮತರಿ(ಬೋಡೊ), ಕಾತ್ಯಾಯಿನಿ ಕುಂಜಿಬೆಟ್ಟು(ಕನ್ನಡ), ಎಸ್.ವಿ.ಆರ್ಯಾಂಬಿಕಾ (ಮಲಯಾಳಂ), ಕ್ವಾರಿಕ್‌ಪಂ ಸುನೀತಾದೇವಿ(ಮಣಿಪುರಿ) ಭಾಷಾ ಕವಿಗಳು ಇದರಲ್ಲಿ ಭಾಗವಹಿಸಲಿದ್ದಾರೆ.

ಕಾವ್ಯೋತ್ಸವದ ಎರಡನೇ ದಿನ, ದಕ್ಷಿಣ ಭಾರತೀಯ ಕಾವ್ಯದ ಸೃಜನಶೀಲತೆ ಮತ್ತು ಪರಿಸರದ ಇತ್ತೀಚಿನ ಒಲವು ಮತ್ತು ನಿಲುವು ವಿಷಯದ ಬಗೆಗಿನ ಸಮ್ಮೇಳನದಲ್ಲಿ ಎಸ್.ಆರ್.ವಿಜಯಶಂಕರ್ (ಕನ್ನಡ) ಅಧ್ಯಕ್ಷತೆ ವಹಿಸಲಿದ್ದಾರೆ. ಇದರಲ್ಲಿ ಕೆ.ಪಿ. ಮೋಹನ್ (ಮಲಯಾಳಂ), ಎನ್.ಮುರುಗೇಶ ಪಾಂಡ್ಯನ್(ತಮಿಳು), ಎಸ್.ಬಾಲಸುಧಾಕರ ಮೌಳಿ(ತೆಲುಗು) ಹಾಗೂ ಎಸ್.ಆರ್.ಶಂಕರ್(ಕನ್ನಡ) ಕೂಡ ಪ್ರಬಂಧ ಮಂಡಿಸಲಿದ್ದಾರೆ.

ಬಳಿಕ ಬಹುಭಾಷಾ ಕವಿಗೋಷ್ಠಿಯಲ್ಲಿ ದಿಗಂತ ಸೈಕಿಯಾ(ಅಸ್ಸಾಮಿ), ನ್ಯೂಟನ್ ಕೆ. ಬಸುಮತರಿ(ಬೋಡೊ), ಮಹದೇವ ಶಂಕನಪುರ(ಕನ್ನಡ), ಟಿ.ಕೆ ಸಂತೋಷ್ ಕುಮಾರ್(ಮಲಯಾಳಂ), ಸಿ.ಎಚ್.ಸುಬದಾನ ದೇವಿ(ಮಣಿಪುರಿ), ರಮ್ಯಾನಿ ಜೋಶಿ(ನೇಪಾಳಿ), ಪಿ.ಸತ್ತಿಯ ಮೋಹನ್(ತಮಿಳು), ಎಸ್.ಬಾಲಸುಧಾಕರ ಮೌಳಿ (ತೆಲುಗು) ಪಾಲ್ಗೊಳಲಿದ್ದಾರೆ.

ಸಾಹಿತ್ಯ ಅಕಾಡೆಮಿ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟವನ್ನು ಕೂಡ ಆಯೋಜಿಸಿದೆ. ಪುಸ್ತಕಗಳ ಮೇಲೆ ವಿಶೇಷ ವಿನಾಯತಿಗಳನ್ನು ಕೂಡ ಸಂಸ್ಥೆ ನೀಡುತ್ತಿದೆ.

- **ಸ್ಥಳ:** ಸೆಮಿನಾರ್ ಹಾಲ್, ಜೈನ್ ಯುನಿವರ್ಸಿಟಿ ಸ್ಕೂಲ್ ಆಫ್ ಸೈನ್ಸ್, ನಂ.34, 1ನೇ ಅಡ್ಡ ರಸ್ತೆ, ಜೆ.ಸಿ ರಸ್ತೆ.